ರಸ್ತೆ ಸಾರಿಗೆ ಸಂಸ್ಥೆ (ಎನ್.ಡಬ್ಲ್ಯೂ.ಆರ್.ಟಿ.ಸಿ) ಅಸ್ತಿತ್ವಕ್ಕೆ ಬರಲಿದೆ. ಇದಾದ 12 ತಿಂಗಳ ಒಳಗೆ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ (ಎನ್.ಇ.ಕೆ.ಆರ್.ಟಿ.ಸಿ) ಅಸ್ತಿತ್ವಕ್ಕೆ ಬರಲಿದೆ.

ಆ) ವಿಭಜನೆ ಆದನಂತರ ಪ್ರತಿಯೊಂದು ಸಂಸ್ಥೆಯೂ ಸ್ವತಂತ್ರವಾಗಿರುವುದರಿಂದ ತನ್ನ ಸರ್ವತೋಮುಖ ಅಭಿವೃದ್ಧಿಗೆ ಸಂಸ್ಥೆಯೇ ಶ್ರಮಿಸುತ್ತದೆ.

ಇ) ಹೊಸ ಸಂಸ್ಥೆಯು ಯಾವ ಸವಲತ್ತುಗಳನ್ನು ಕೇಳುತ್ತದೆಯೋ ಅದರ ಬಗ್ಗೆ ಯೋಜಿಸಿ ತೀರ್ಮಾನ ತೆಗೆದುಕೊಳ್ಳಲಾಗುವುದು.

ಆಶ್ರಯ ಸಮಿತಿಗಳ ರಚನೆ

3010 - ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಶ್ರಯ ಸಮಿತಿಗಳನ್ನು ಎಷ್ಟು ವಿಧಾನಸಭಾ ಕ್ಷೇತ್ರಗಳಲ್ಲಿ ರಚಿಸಲಾಗಿದೆ?

ಆ) ಹಾಗಿದ್ದಲ್ಲಿ ಬಾಕಿ ಉಳಿದಿರುವ ಕ್ಷೇತ್ರಗಳೆಷ್ಟು?

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು) :

ಅ) ಆಶ್ರಯ ಸಮಿತಿಗಳನ್ನು ರಾಜ್ಯದ 175 ತಾಲ್ಲೂಕುಗಳಲ್ಲಿ ಹಾಗೂ 213 ಪಟ್ಟಣ/ನಗರಗಳಲ್ಲಿ ರಚಿಸಬೇಕಾಗಿದ್ದು, ಈ ಪೈಕಿ ಒಟ್ಟು 80 ತಾಲ್ಲೂಕಾ ವಸತಿ ಸಮಿತಿಗಳನ್ನು ಹಾಗೂ 70 ಪಟ್ಟಣ/ನಗರ ವಸತಿ ಸಮಿತಿಗಳನ್ನು ರಚಿಸಲಾಗಿದೆ.

ಆ) 95 ತಾಲ್ಲೂಕಾ ವಸತಿ ಸಮಿತಿಗಳನ್ನು ಹಾಗೂ 143 ಪಟ್ಟಣ/ನಗರ ಸಮಿತಿಗಳನ್ನು ರಚಿಸಬೇಕಾಗಿದೆ.

ರಾಜ್ಯದಲ್ಲಿ ಅಂಗನವಾಡಿ ಕಾರ್ಯಕರ್ತೆ ಹಾಗೂ ಆಯಾಗಳಿಗೆ ಮಾಸಿಕ ವೇತನ

3011 - ಶ್ರೀ ಮಂಜುನಾಥ್ ಸಿ. ಕುನ್ನೂರ್ (ಶಿಗ್ಗಾಂವ್) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಂಗನವಾಡಿ ಕಾರ್ಯಕರ್ತೆಯರ ಸಂಖ್ಯೆ ಎಷ್ಟು?

ಆ) ಸದರೀ ಅಂಗನವಾಡಿಯಲ್ಲಿ ಕೆಲಸ ಮಾಡುವ ಆಯಾಗಳ ಸಂಖ್ಯೆ ಎಷ್ಟು?

ಇ) ಸದರೀ ಅಂಗನವಾಡಿ ಕಾರ್ಯಕರ್ತೆಯರಿಗೆ ಹಾಗೂ ಆಯಾಗಳಿಗೆ ಎಷ್ಟು ಮಾಸಿಕ ವೇತನ ನೀಡಲಾಗಿದೆ?

ಈ) ಸದರೀ ಮಾಸಿಕ ವೇತನ ಹೆಚ್ಚು ಮಾಡುವ ಕುರಿತು ರಾಜ್ಯ ಸರ್ಕಾರವು ಹಾಗೂ ಕೇಂದ್ರ ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀಮತಿ ವಿಮಲಾಬಾಯಿ ಜಗದೇವರಾವ್ ದೇಶ್‌ಮುಖ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು) :

ಅ) ಹಾಲೀ ರಾಜ್ಯದಲ್ಲಿ 38,093 ಅಂಗನವಾಡಿ ಕಾರ್ಯಕರ್ತೆಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಆ) ರಾಜ್ಯದಲ್ಲಿರುವ ಅಂಗನವಾಡಿಗಳಲ್ಲಿ ಹಾಲೀ 39,007 ಅಂಗನವಾಡಿ ಸಹಾಯಕಿಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಇ) ಅಂಗನವಾಡಿ ಕಾರ್ಯಕರ್ತೆಯರಿಗೆ ಹಾಗೂ ಸಹಾಯಕಿಯರಿಗೆ ಭಾರತ ಸರ್ಕಾರದ ಮಾರ್ಗಸೂಚಿಯಂತೆ ಈ ಕೆಳಕಂಡಂತೆ ಮಾಸಿಕ ಗೌರವಧನ ನೀಡಲಾಗುತ್ತಿದೆ.

ಅಂಗನವಾಡಿ ಕಾರ್ಯಕರ್ತೆಯರು	ರೂ.
1. ಎಸ್.ಎಸ್.ಎಲ್.ಸಿ. ಅನುತ್ತೀರ್ಣರಾದವರಿಗೆ	350.00
2. ಎಸ್.ಎಸ್.ಎಲ್.ಸಿ. ಅನುತ್ತೀರ್ಣರಾಗಿದ್ದು 5 ವರ್ಷ ಅನುಭವ ಉಳ್ಳವರಿಗೆ	375.00
3. ಎಸ್.ಎಸ್.ಎಲ್.ಸಿ. ಅನುತ್ತೀರ್ಣರಾಗಿದ್ದು 10 ವರ್ಷ ಅನುಭವ ಉಳ್ಳವರಿಗೆ	400.00
4. ಎಸ್.ಎಸ್.ಎಲ್.ಸಿ. ಉತ್ತೀರ್ಣರಾದವರಿಗೆ	400.00
5. ಎಸ್.ಎಸ್.ಎಲ್.ಸಿ. ಉತ್ತೀರ್ಣರಾಗಿ 5 ವರ್ಷ ಅನುಭವ ಉಳ್ಳವರಿಗೆ	425.00
6. ಎಸ್.ಎಸ್.ಎಲ್.ಸಿ. ಉತ್ತೀರ್ಣರಾಗಿ 10 ವರ್ಷ ಅನುಭವ ಉಳ್ಳವರು	450.00
7. ಅಂಗನವಾಡಿ ಸಹಯಕಿಯರಿಗೆ	200.00

ಅಲ್ಲದೇ ರಾಜ್ಯ ಸರ್ಕಾರವು ತನ್ನ ವತಿಯಿಂದ ಅಂಗನವಾಡಿ ಕಾರ್ಯಕರ್ತೆಯರಿಗೆ ಹಾಗೂ ಸಹಾಯಕಿಯರಿಗೆ ಮಾಹೆಯಾನ ರೂ.100.00 ಹಾಗೂ ರೂ.50.00 ಹೆಚ್ಚುವರಿ ಗೌರವಧನವನ್ನು ದಿನಾಂಕ 1.11.1995ರಿಂದ ಪಾವತಿ ಮಾಡುತ್ತಿದೆ.

ಈ) ಕೇಂದ್ರ ಸರ್ಕಾರವು ದಿನಾಂಕ 16.5.1997ರಿಂದ ಅನ್ವಯವಾಗುವಂತೆ ಅಂಗನವಾಡಿ ಕಾರ್ಯಕರ್ತೆಯರಿಗೆ ಶೇಕಡ 25ರಷ್ಟು ಹಾಗೂ ಸಹಾಯಕಿಯರಿಗೆ ಶೇಕಡ 30 ರಷ್ಟು ಗೌರವಧನ ಹೆಚ್ಚಿಸಿರುತ್ತದೆ.

ರಾಜ್ಯದಲ್ಲಿ ತಾಳೆ ಬೆಳೆ ಅಭಿವೃದ್ಧಿ ಕುರಿತು

3012 - ಶ್ರೀ ಕೆ. ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ತಾಳೆ ಬೆಳೆಗಾರರ ಸಂಖ್ಯೆ ಎಷ್ಟು?